**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-161 /2020** **DW-1**

**ದಿಃ 07.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 11 ನೇ ಪ್ರತಿವಾದಿ ಪರ ಶ್ರೀ ಎ ವಿ ಎಸ್ ವಕೀಲರಿಂದಃ**

ನಾನು ಈ ದಾವೆಯಲ್ಲಿ 11 ನೇ ಪ್ರತಿವಾದಿಯ ಒಟ್ಟುಮೊಕ್ತಿಯಾರನಾಗಿದ್ದು, ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

11 ನೇ ಪ್ರತಿವಾದಿಯು ಬರೆದುಕೊಟ್ಟ ಜಿಪಿಎ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ಎಚ್ ವಕೀಲರಿಂದಃ**

**1.** 11 ನೇ ಪ್ರತಿವಾದಿಯು ಕಾನಕಾರ್ಡ ಡೆವಲಪರ್ಸನ ಮಾಲೀಕರಾಗಿರುತ್ತಾರೆ. ನಾನಾಗಲಿ ನನ್ನ ಮಾಲೀಕರಾಗಲಿ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಆಸ್ತಿಯ ಪೂರ್ವಾಪರದ ಬಗ್ಗೆ ವಿಚಾರ ಮಾಡುತ್ತೇವೆ. ತಾವು ಖರೀದಿ ಮಾಡಿದ ಆಸ್ತಿಯು ಬಸಪ್ಪ ಪೂಜಾರ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಇರಬಹುದು. ಬಸಪ್ಪ ಪೂಜಾರಿಗೆ ಬೀಮವ್ವ ಎಂಬ ಹೆಂಡತಿ ಇರುತ್ತಾರೆ ಎಂದರೆ ಸರಿ. ತಿಪ್ಪವ್ವ ಬಸಪ್ಪನ ಸಹೋದರಿ ಎಂದರೆ ಸರಿ. ವಾದಿಯರು ಬಸಪ್ಪನ ಹೆಣ್ಣು ಮಕ್ಕಳು ಎಂದರೆ ಸರಿ. ಕ್ರಯ ಪತ್ರದಲ್ಲಿ ವಾದಿಯರದಾಗಲಿ , 1 ಮತ್ತು 6 ನೇ ಪ್ರತಿವಾದಿಯರದಾಗಲಿ ಸಹಿ ಇಲ್ಲ ಎಂದರೆ ಸರಿ.

2. ತಾವು ಖರೀದಿ ಮಾಡುವ ಪೂರ್ವದಲ್ಲಿ ವಾದಿಯರಗಾಗಲಿ , 1 ಮತ್ತು 6 ನೇ ಪ್ರತಿವಾದಿಯರದಾಗಲಿ ಸಂಪರ್ಕಿಸಿಲ್ಲ ಎಂದರೆ ಸಾಕ್ಷಿಯು ಖರೀದಿ ಹಿಡಿದ ವ್ಯಕ್ತಿಗಳ ತಂದೆ

ತಾಯಿಯ ಬಳಿ ವಿಚಾರಿಸಿರುತ್ತೇವೆ ಎನ್ನುತ್ತಾರೆ. 2001 ರಲ್ಲಿಯೇ 2 ರಿಂದ 4 ನೇ ಪ್ರತಿವಾದಿಯರ ತಂದೆಯು ಮರಣ ಹೊಂದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಪರಿಚಯ ಇತ್ತು ಎನ್ನುತ್ತಾರೆ. ನನಗೆ ವಾದಿ ಮತ್ತು ಪ್ರತಿವಾದಿ ನಂಃ 1 ರಿಂದ 6 ರವರ ಮನೆಯಲ್ಲಿ ಏನೆಲ್ಲಾ ಮಾತುಕತೆಗಳು ವ್ಯವಹಾರ ಆಗಿದೇ ಎಂಬ ಬಗ್ಗೆ ಮಾಹಿತಿ ಇಲ್ಲ. ವಾದಿಯರು ಭಾಗ ಕೊಡಿ ಎಂದು 1 ರಿಂದ 6 ನೇ ಪ್ರತಿವಾದಿಯರ ಬಳಿ ಕೇಳಿದ್ದು ಅವರು ಮುಂದೂಡುತ್ತಾ ಬಂದಿರುತ್ತಾರೆಂದರೆ ಸಾಕ್ಷಿಯು ಈ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಖರೀದಿ ಮಾಡುವ ಪೂರ್ವದಲ್ಲಿ ಬಸಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಇರುವ ವಿಚಾರ ಗೊತ್ತಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. 2 ರಿಂದ 4 ನೇ ಪ್ರತಿವಾದಿಯರ ಬಳಿ ಅವರಿಗೆ ಸಹೋದರಿಯರು ಇರುತ್ತಾರೋ ಇಲ್ಲವೋ ಎಂಬ ಬಗ್ಗೆ ವಿಚಾರಿಸಿಲ್ಲ. ಈ ಪ್ರಕರಣ ಚಾಲ್ತಿಯಲ್ಲಿದ್ದಾಗಲೂ 2 ರಿಂದ 4 ನೇ ಪ್ರತಿವಾದಿಯರು ತಮ್ಮ ಬಳಿ ಬೇರೆ ಆಸ್ತಿಯನ್ನು ಮಾರಾಟ ಮಾಡುವದಾಗಿ ಹೇಳಿ ಹಣವನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಈಗಲೂ ಸಹ 2 ರಿಂದ 4 ನೇ ಪ್ರತಿವಾದಿಯರಿಗೆ ತಮ್ಮ ಪಾಲಿನ ಹಣವನ್ನು ಬೇರೆ ಆಸ್ತಿಗೆ ಸಂಬ್ಧದಿಸಿದಂತೆ ತೆಗೆದುಕೊಂಡು ಹೋಗಿ ಎಂದು ಪೋನು ಮುಖಾಂತರ ತಿಳಿಸುತ್ತಿದ್ದಾರೆಂದರೆ ಗೊತ್ತಿಲ್ಲ. ತಾವು 11 ನೇ ಪ್ರತಿವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರು ಸೇರಿಕೊಂಡು ವಾದಿಯರಿಗೆ ಭಾಗ ಕೊಡಬಾರದು ಎಂದು ಹಾಗೂ ಅವರ ಪಾಲನ್ನು ಹೊಡೆದುಕೊಳ್ಳಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಂಃ 1 ರಿಂದ 6 ನೇದವರು ಭಾಗ ಕೊಡುವದಿಲ್ಲ ಎಂದು ಹೇಳಿದ ನಂತರ ದಾಖಲೆಗಳನ್ನು ಪರಿಶೀಲಿಸಿದಾಗ ವಾದಿಯರಿಗೇ ತಮಗೆ ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆಂದರೆ ಗೊತ್ತಿಲ್ಲ. ವಾದಿಯರ ಸಹಿ ಇರದ ಕಾರಣ ಕ್ರಯ ಪತ್ರವು ವಾದಿಯರಿಗೆ ಬಾಂಧಾಯಿಸುವದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಭಾಗ ಕೊಡಬೇಕಾಗುತ್ತದೆಂದು ತಿಳಿದು ಸುಳ್ಳು ಪ್ರಮಾಣ ಪತ್ರ ಹಾಕಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.